2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 35/2019

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಭಾಸ್ಕರ್ | ಪಿಡಬ್ಲೂ-10 |
| ತಂದೆಯ ಹೆಸರು | - | ದೊಂಬಯ್ಯ | ಸಿಡಬ್ಲೂ -10 |
| ವಯಸ್ಸು | - | 42 ವರ್ಷ | |
| ಉದ್ಯೋಗ | - | ಕೂಲಿ ಕೆಲಸ | |
| ವಾಸ ಸ್ಥಳ | - | ಬಾಳೆಹೊಳೆ | |

ದಿನಾಂಕಃ 11.01.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಆರೋಪಿತರು ಯಾರೆಂದು ನನಗೆ ಗೊತ್ತಿಲ್ಲ. ನಾನು ಅವರನ್ನು ನೋಡಿಲ್ಲ. ಮೃತ ರುದ್ರಸ್ವಾಮಿ ಗೊತ್ತಿಲ್ಲ. ಚಾಸಾ.1 ಗೊತ್ತಿಲ್ಲ. ಪ್ರಾಸಾ.7 ರಿಂದ ಪ್ರಾಸಾ.9 ಗೊತ್ತಿಲ್ಲ. ಉಳಿದ ಸಾಕ್ಷಿದಾರರು ಗೊತ್ತಿಲ್ಲ.

2. ತರೀಕೆರೆ ಪೊಲೀಸರು ನನ್ನನ್ನು ಯಾವುದೇ ವಿಚಾರಣೆಗೆ ಕರೆಸಿಲ್ಲ. ನಾನು ಯಾವುದೇ ರುಂಡವನ್ನು ಯಾವುದೇ ಕೆರೆಯಿಂದ ತೆಗೆದು ಸದರಿ ಪೊಲೀಸರಿಗೆ ಹಾಜರುಪಡಿಸಿಲ್ಲ. ಆ ಬಗ್ಗೆ ನಾನು ಸದರಿ ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

3. ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ತನ್ನ ಇರುವಿಕೆಯನ್ನು ಅಲ್ಲಗಳೆದಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

4. ದಿನಾಂಕ 11.11.2018 ರಂದು ರಾತ್ರಿ 11.30 ಗಂಟೆ ಸಮಯದಲ್ಲಿ ತರೀಕೆರೆಯ ವೃತ್ತ ನಿರೀಕ್ಷಕರಾದ ಚಾಸಾ.49 ರವರು ನನಗೆ ಕರೆ ಮಾಡಿ ಆಗ್ಗೆ 3-4 ದಿನಗಳ ಹಿಂದೆ ರುದ್ರಸ್ವಾಮಿ ಎಂಬುವವನ ಕುತ್ತಿಗೆಯನ್ನು ಕಡಿದು ಕೊಲೆ ಮಾಡಿ ರುಂಡ ಮತ್ತು ಮುಂಡವನ್ನು ಬೇರ್ಪಡಿಸಿ ಚೀಲದಲ್ಲಿ ಕಟ್ಟಿ ಬುಕ್ಕಾಂಬೂದಿಯ ಬುಕ್ಕರಾಯನ ಕೆರೆಯಲ್ಲಿ ಎಸೆದಿರುವುದಾಗಿ ಮತ್ತು ಮುಂಡವು ಆಗಾಗಲೇ ಕೆರೆಯಲ್ಲಿ ಸಿಕ್ಕಿರುವುದಾಗಿ ತಿಳಿಸಿ ಈ ಪ್ರಕರಣದ ಆರೋಪಿಗಳನ್ನು ದಸ್ತಗಿರಿ ಮಾಡಿಕೊಂಡು ಬಂದಿದ್ದು, ಅವರುಗಳು ರುಂಡವನ್ನು ಎಸೆದ ಸ್ಥಳವನ್ನು ತೋರಿಸುವುದಾಗಿ ಮಾರನೇ ದಿನ ಬೆಳಿಗ್ಗೆ ಬುಕ್ಕಾಂಬೂದಿಯ ಬುಕ್ಕರಾಯನ ಕೆರೆಗೆ ಬಂದು ಕೆರೆಯ ನೀರಿನಲ್ಲಿ ರುಂಡವನ್ನು ಹುಡುಕಿ ಪತ್ತೆ ಮಾಡಿಕೊಡುವಂತೆ ತಿಳಿಸಿದರು ಎಂದರೆ ಸರಿಯಲ್ಲ. ಅದರಂತೆ ನಾನು ದಿನಾಂಕ 12.11.2018 ರಂದು ಬೆಳಿಗ್ಗೆ 11.00 ಗಂಟೆಗೆ ಬುಕ್ಕಾಂಬೂದಿಯ ಬುಕ್ಕರಾಯನ ಕೆರೆಯ ಹತ್ತಿರ ಹೋಗಿದ್ದೆನು ಎಂದರೆ ಸರಿಯಲ್ಲ. ಮಧ್ಯಾಹ್ನ 12.00 ಗಂಟೆ ಸುಮಾರಿಗೆ ಚಾಸಾ.49 ರವರು ಈ ಪ್ರಕರಣದಲ್ಲಿ ದಸ್ತಗಿರಿ ಮಾಡಿದ್ದ 1 ರಿಂದ 3 ನೇ ಆರೋಪಿತರೊಂದಿಗೆ ಅಲ್ಲಿಗೆ ಬಂದರು ಎಂದರೆ ಸರಿಯಲ್ಲ. ಆಗ ಆರೋಪಿತರು ತಾವು ರುಂಡವನ್ನು ಎಸೆದ ಸ್ಥಳವನ್ನು ತೋರಿಸಿದರು ಎಂದರೆ ಸರಿಯಲ್ಲ. ನಾನು ಸದರಿ ಬುಕ್ಕರಾಯನ ಕೆರೆಯ ನೀರಿನಲ್ಲಿ ಮುಳುಗಿ

ಗೋಣಿಚೀಲದಲ್ಲಿ ಕಟ್ಟಿದ್ದ ರುಂಡವನ್ನು ಮೇಲೆ ತಂದು ತನಿಖಾಧಿಕಾರಿಗಳಿಗೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅವರು ಸದರಿ ರುಂಡವನ್ನು, ಅದಕ್ಕೆ ಕಟ್ಟಿದ್ದ ಒಂದು ಗೋಣಿ ಚೀಲ, ಒಂದು ಹಳದಿ ಬಣ್ಣದ ಪ್ಲಾಸ್ಟಿಕ್ ಚೀಲ, ಗೋಣಿ ಚೀಲದೊಳಗೆ ಇದ್ದ ಒಂದು ಸೈಜು ಗಾತ್ರದ ಕಲ್ಲು ಮತ್ತು ಎರಡು ಮೈನ್ಸ್ ವೈಯರ್ ನ ತುಂಡುಗಳನ್ನು ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ನಂತರ ಆರೋಪಿತರು ಮೃತ ವ್ಯಕ್ತಿಗೆ ಸಂಬಂಧಿಸಿದ 4 ಮೊಬೈಲ್ ಹ್ಯಾಂಡ್ ಸೆಟ್ಟುಗಳನ್ನು ಮತ್ತು ಆತನ ಕಾರಿನ ಕೀಯನ್ನು ಬುಕ್ಕಾಂಬೂದಿ ಮಾಕನಹಳ್ಳಿ ಮಧ್ಯೆ ಇರುವ ಮಾಕನಹಳ್ಳಿ ಕೆರೆಯ ನೀರಿನಲ್ಲಿ ಎಸೆದಿರುವುದಾಗಿ ತಿಳಿಸಿದ್ದ ಮೇರೆಗೆ ನಾವು ಮಾಕನಹಳ್ಳಿ ಕೆರೆಯ ಬಳಿ ಹೋದೆವು ಎಂದರೆ ಸರಿಯಲ್ಲ. ನಾನು ಸದರಿ ಕೆರೆಯ ಹತ್ತಿರ ಹೋಗಿ ಆರೋಪಿ ತೋರಿಸಿದ ಸ್ಥಳದಲ್ಲಿ ನೀರಿನಲ್ಲಿ ಮುಳುಗಿ ನೋಡಲಾಗಿ ಯಾವುದೇ ಮೊಬೈಲ್ ಸೆಟ್ಟು ಗಳು ಮತ್ತು ಕಾರಿನ ಕೀ ಸಿಕ್ಕಿರುವುದಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ನಾನು ಅದೇ ದಿನ ತನಿಖಾಧಿಕಾರಿಗಳಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಸದರಿ ಹೇಳಿಕೆಯನ್ನು ನಿಪಿ.21 ಎಂದು ಗುರುತಿಸಲಾಯಿತು.

5. ನೀವು ಕೆರೆಯ ನೀರಿನಲ್ಲಿ ಮುಳುಗಿ ರುಂಡವನ್ನು ತಂದು ಪೊಲೀಸರಿಗೆ ಹಾಜರುಪಡಿಸಿದ್ದು, ಆ ಬಗ್ಗೆ ನಿಪಿ.21 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಮತ್ತು ಆ ಸಮಯದಲ್ಲಿ ತೆಗೆದ

ಎರಡು ಫೋಟೋಗಳಲ್ಲಿ ನಿಮ್ಮ ಇರುವಿಕೆ ಇದ್ದರೂ ಸಹ ಅವುಗಳನ್ನು ಅಲ್ಲಗಳೆದು ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.